**2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 10**

**ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018**

**ಪ್ರಕರಣಗಳ ಪಟ್ಟಿ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕೆಲವು ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳು ಇತ್ಯಾದಿಗಳನ್ನು ಪಡೆಯುವುದಕ್ಕಾಗಿ ಆಧಾರ್ ಸಂಖ್ಯೆಯ ರುಜುವಾತಿನ ಅವಶ್ಯಕತೆ
4. ರಾಜ್ಯ ಸರ್ಕಾರದಿಂದ ಸ್ಕೀಮುಗಳನ್ನು ಅಧಿಸೂಚಿಸುವುದು
5. ಕೇಂದ್ರ ಅಧಿನಿಯಮದ ಅಧ್ಯಾಯ III ಮತ್ತು VIರ ಅನ್ವಯ.
6. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಣಗೊಳಿಸುವಂತಿಲ್ಲ
7. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ
8. ನಿಯಮಗಳ ರಚನಾಧಿಕಾರ
9. ತೊಂದರೆಗಳ ನಿವಾರಣೆಗೆ ಅಧಿಕಾರ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2018ರ ಅಧಿನಿಯಮ ಸಂಖ್ಯೆ 10.–** ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ವಿಧೇಯಕ, 2018 ನ್ನು ಈ ಮುಂದಿನವುಗಳಿಗಾಗಿ, ಎಂದರೆ:–

(1) ಆಧಾರ್ ಗುರುತಿಸುವಿಕೆಯ ಮೂಲಕ ರಾಜ್ಯ ಸರ್ಕಾರದ ಅಥವಾ ಅದರ ಏಜೆನ್ಸಿಗಳ ಈ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿವಿಧ ರೀತಿಯ ಸಬ್ಸಿಡಿಗಳು, ಪ್ರಯೋಜನಗಳು, ಸೇವೆಗಳು, ಅನುದಾನಗಳು, ಮಜೂರಿಗಳು ಮತ್ತು ಇತರ ಸಾಮಾಜಿಕ ಪ್ರಯೋಜನಕಾರಿ ಸ್ಕೀಮುಗಳ ವಿತರಣೆಗಾಗಿ ಉದ್ದೇಶಿತ ಫಲಾನುಭವಿಗಳನ್ನು ಸರಿಯಾಗಿ ಗುರುತಿಸಲು;

(2) ಮುಂದುವರೆದು ಉದ್ದೇಶಿತ ಫಲಾನುಭವಿಗಳಿಗೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳು ತಲುಪುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು;

(3) ಕರ್ನಾಟಕದ ಸಂಚಿತ ನಿಧಿಯಿಂದ ಅಥವಾ ಇತರ ಏಜೆನ್ಸಿಗಳಿಂದ ನಿಧಿಯನ್ನು ಪಡೆದ ವಿವಿಧ ರೀತಿಯ ಸಬ್ಸಿಡಿಗಳು, ಪ್ರಯೋಜನಗಳು, ಸೇವೆಗಳು, ಅನುದಾನಗಳು, ಮಜೂರಿಗಳು ಮತ್ತು ಇತರ ಸಾಮಾಜಿಕ ಪ್ರಯೋಜನ ಸ್ಕೀಮುಗಳ ವಿತರಣೆಗಾಗಿ ಆಧಾರ್ ಗುರುತಿಸುವಿಕೆಯ ಬಳಕೆಯನ್ನು ಜೋಡಿಸಲು; ಮತ್ತು

(4) ಆಧಾರ್‌ನ್ನು ಏಕೈಕ ಗುರುತಿಸುವಿಕೆಯೆಂದು ಬಳಸಿ ಕರ್ನಾಟಕ ರಾಜ್ಯದಲ್ಲಿ ವಾಸ ಮಾಡುತ್ತಿರುವ ವ್ಯಕ್ತಿಗಳಿಗೆ ರಾಜ್ಯ ಸರ್ಕಾರದ ಸಂಚಿತ ನಿಧಿಯಿಂದ ಅಥವಾ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಯ ಮೂಲಕ ಭರಿಸಿದ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉತ್ತಮ ನಿರ್ವಹಣೆ, ದಕ್ಷ, ಪಾರದರ್ಶಕ ಮತ್ತು ಉದ್ದೇಶಿತ ವಿತರಣೆಗೆ;

–ಉಪಬಂಧ ಕಲ್ಪಿಸಲು ಅಧಿನಿಯಮಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2018ರ ವಿಧಾನಸಭೆಯ ವಿಧೇಯಕ ಸಂಖ್ಯೆ 52, ಕಡತ ಸಂಖ್ಯೆ:ಸಂವ್ಯಶಾಇ 46 ಶಾಸನ 2017]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 9 ಮತ್ತು 42 ಹಾಗೂ 3ನೇ ಪಟ್ಟಿಯ 20, 23 ಮತ್ತು 24ನೆಯ ನಮೂದನೆಯಡಿಯಲ್ಲಿ ಬರುತ್ತದೆ.]

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 10**

(2018ರ ಮಾರ್ಚ್ ತಿಂಗಳ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018**

(2018ರ ಮಾರ್ಚ್ ತಿಂಗಳ ಏಳನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ರಾಜ್ಯದ ಸಂಚಿತ ನಿಧಿಯಿಂದ ವೆಚ್ಚವನ್ನು ಭರಿಸುತ್ತಿರುವ ಹಣಕಾಸು ಮತ್ತು ಇತರ ಸಬ್ಸಿಡಿಗಳು, ಪ್ರಯೋಜನಗಳು ಹಾಗೂ ಸೇವೆಗಳನ್ನು ಕರ್ನಾಟಕ ರಾಜ್ಯದಲ್ಲಿ ವಾಸಮಾಡುತ್ತಿರುವ ವ್ಯಕ್ತಿಗಳಿಗೆ ಉದ್ದೇಶಿತ ವಿತರಣೆಗಾಗಿ, ಆಧಾರ್ ಅನ್ನು ಒಂದು ಏಕೈಕ ಗುರುತಿಸುವಿಕೆಯಾಗಿ ಬಳಸಿಕೊಂಡು, ದಕ್ಷ, ಪಾರದರ್ಶಕ ಮತ್ತು ಒಂದು ಉತ್ತಮ ಆಡಳಿತ ಕ್ರಮವನ್ನಾಗಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ರಾಜ್ಯದ ಸಂಚಿತ ನಿಧಿಯಿಂದ ವೆಚ್ಚವನ್ನು ಭರಿಸುತ್ತಿರುವ ಹಣಕಾಸು ಮತ್ತು ಇತರ ಸಬ್ಸಿಡಿಗಳು, ಪ್ರಯೋಜನಗಳು ಹಾಗೂ ಸೇವೆಗಳನ್ನು ಕರ್ನಾಟಕ ರಾಜ್ಯದಲ್ಲಿ ವಾಸಮಾಡುತ್ತಿರುವ ವ್ಯಕ್ತಿಗಳಿಗೆ ಉದ್ದೇಶಿತ ವಿತರಣೆಗಾಗಿ ಆಧಾರ್ ಅನ್ನು ಒಂದು ಏಕೈಕ ಗುರುತಿಸುವಿಕೆಯಾಗಿ ಬಳಸಿಕೊಂಡು, ದಕ್ಷ, ಪಾರದರ್ಶಕ ಮತ್ತು ಒಂದು ಉತ್ತಮ ಆಡಳಿತ ಕ್ರಮವನ್ನಾಗಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಕಾನೂನನ್ನು ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮವಾಗಲಿ ಎಂದರೆ.-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ರಾಜ್ಯ ಸರ್ಕಾರದ ಏಜೆನ್ಸಿ" ಎಂದರೆ, ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಮತ್ತು ಅದರ ನಿಯಂತ್ರಣದಲ್ಲಿರುವ ಯಾವುದೇ ಇತರ ನಿಕಾಯವನ್ನು ಒಳಗೊಂಡಂತೆ ಕರ್ನಾಟಕ ರಾಜ್ಯದಲ್ಲಿನ ಯಾವುದೇ ಕೇಂದ್ರ ಅಥವಾ ರಾಜ್ಯ ಕಾನೂನಿನ ಮೂಲಕ ಸ್ಥಾಪನೆಯಾದ ಅಥವಾ ರಚನೆಯಾದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಮತ್ತು ಇದು ರಾಜ್ಯ ಸರ್ಕಾರದ ಪ್ರಧಾನ ನಿಯಂತ್ರಣದಲ್ಲಿ ರಚನೆಯಾದ ಮತ್ತು ಆಡಳಿತ ಹೊಂದಿರುವ ನಿಕಾಯಗಳನ್ನು ಒಳಗೊಳ್ಳುತ್ತದೆ;

(ಬಿ) "ಪ್ರಯೋಜನ" ಎಂದರೆ, ಒಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಒದಗಿಸುವ ಯಾವುದೇ ಅನುಕೂಲ, ಕೊಡುಗೆ, ಬಹುಮಾನ, ಪರಿಹಾರ ಅಥವಾ ನಗದು ಅಥವಾ ಇತರ ರೂಪದಲ್ಲಿನ ಸಂದಾಯ ಹಾಗೂ ಇದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಪ್ರಯೋಜನಗಳನ್ನು ಒಳಗೊಳ್ಳುತ್ತದೆ;

(ಸಿ) "ಕೇಂದ್ರ ಅಧಿನಿಯಮ" ಎಂದರೆ, ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 18);

(ಡಿ) "ರಾಜ್ಯದ ಸಂಚಿತ ನಿಧಿ" ಎಂದರೆ, ಕರ್ನಾಟಕ ರಾಜ್ಯದ ಸಂಚಿತ ನಿಧಿ;

(ಇ) "ಸರ್ಕಾರ" ಅಥವಾ "ರಾಜ್ಯ ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಫ್) "ಸೇವೆಗಳು" ಎಂದರೆ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಯಾವುದೇ ರೂಪದಲ್ಲಿ ಒದಗಿಸುವ ಯಾವುದೇ ಅವಕಾಶ, ಸೌಲಭ್ಯ, ಉಪಯುಕ್ತತೆ ಅಥವಾ ಯಾವುದೇ ಇತರ ನೆರವು ಹಾಗೂ ಇದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಇತರ ಸೇವೆಗಳನ್ನು ಒಳಗೊಳ್ಳುತ್ತದೆ;

(ಜಿ) "ಸಬ್ಸಿಡಿ" ಎಂದರೆ, ಒಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ನಗದು ಅಥವಾ ಯಾವುದೇ ರೂಪದಲ್ಲಿ ನೀಡುವ ಯಾವುದೇ ವಿಧದ ನೆರವು, ಬೆಂಬಲ, ಅನುದಾನ, ಧನಸಹಾಯ ಅಥವಾ ವಿನಿಯೋಗ ಹಾಗೂ ಇದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಸಬ್ಸಿಡಿಗಳನ್ನು ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಮೇಲೆ ಎಲ್ಲಿಯೂ ಪರಿಭಾಷಿಸದೆ ಇರುವ ಪದಗಳು ಮತ್ತು ಪದಾವಳಿಗಳು ಅನುಕ್ರಮವಾಗಿ ಕೇಂದ್ರ ಅಧಿನಿಯಮದಲ್ಲಿ ಅವುಗಳಿಗೆ ನೀಡಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಕೆಲವು ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳು ಇತ್ಯಾದಿಗಳನ್ನು ಪಡೆಯುವುದಕ್ಕಾಗಿ ಆಧಾರ್ ಸಂಖ್ಯೆಯ ರುಜುವಾತಿನ ಅವಶ್ಯಕತೆ.**- ರಾಜ್ಯದ ಸಂಚಿತ ನಿಧಿ ಅಥವಾ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಯ ಮೂಲಕ ರಚಿಸಿದ ಯಾವುದೇ ನಿಧಿಯಿಂದ ಸಂಪೂರ್ಣವಾಗಿ ಭರಿಸುವ ಮೂಲಕ ಅಥವಾ ಸ್ವೀಕರಿಸುವ ಮೂಲಕ ಮಾಡಿದ ವೆಚ್ಚದ ಭಾಗವಾಗುವ ಸಬ್ಸಿಡಿ, ಪ್ರಯೋಜನ ಅಥವಾ ಸೇವೆಯನ್ನು ಪಡೆಯುವುದಕ್ಕಾಗಿ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಯು ಒಬ್ಬ ವ್ಯಕ್ತಿಯ ಗುರುತನ್ನು ಸ್ಥಾಪಿಸುವ ಉದ್ದೇಶಕ್ಕಾಗಿ, ಆಧಾರ್ ಸಂಖ್ಯೆಯನ್ನು ಹೊಂದಿರುವ ಅಥವಾ

ಆಧಾರ್ ಸಂಖ್ಯೆಯನ್ನು ನೀಡಿಲ್ಲದ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ವ್ಯಕ್ತಿಯು ಆಧಾರ್ ದಾಖಲು ನಮೂದನೆಗಾಗಿ (enrollment) ಅರ್ಜಿಯನ್ನು ಸಲ್ಲಿಸಿರುವ ರುಜುವಾತನ್ನು ಒದಗಿಸತಕ್ಕದ್ದು ಎಂಬ ಷರತ್ತಿನಿಂತೆ, ಅಂಥ ವ್ಯಕ್ತಿಯು ದೃಢೀಕರಣಕ್ಕೆ (authentication) ಒಳಗಾಗುವುದನ್ನು ಅಗತ್ಯಪಡಿಸಬಹುದು.

ಪರಂತು, ಒಬ್ಬ ವ್ಯಕ್ತಿಗೆ ಆಧಾರ್ ಸಂಖ್ಯೆಯನ್ನು ನೀಡದಿದ್ದ ಅಂಥ ಅವಧಿಯವರೆಗೆ, ಸಬ್ಸಿಡಿ, ಪ್ರಯೋಜನ ಅಥವಾ ಸೇವೆಯನ್ನು ಅಂಥ ವ್ಯಕ್ತಿಗೆ ನೀಡುವುದಕ್ಕಾಗಿ ಪರ್ಯಾಯ ಮತ್ತು ಕಾರ್ಯಸಾಧುವಾಗಬಲ್ಲ (Viable) ರೀತಿಯ ಗುರುತನ್ನು ಕೋರತಕ್ಕದ್ದು.

**4. ರಾಜ್ಯ ಸರ್ಕಾರದಿಂದ ಸ್ಕೀಮುಗಳನ್ನು ಅಧಿಸೂಚಿಸುವುದು.–** ರಾಜ್ಯ ಸರ್ಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ಮತ್ತು ತದನಂತರ ಕಾಲಕಾಲಕ್ಕೆ 3ನೇ ಪ್ರಕರಣಕ್ಕೆ ಅನುಸಾರವಾಗಿ ಅಂಥ ದೃಢೀಕರಣ ಅಥವಾ ರುಜುವಾತು ಅಗತ್ಯವಿರುವ ಸ್ಕೀಮುಗಳು, ಸಬ್ಸಿಡಿಗಳು, ಪ್ರಯೋಜನ ಅಥವಾ ಸೇವೆಗಳ ಪಟ್ಟಿಯನ್ನು ಅಧಿಸೂಚಿಸತಕ್ಕದ್ದು.

**5. ಕೇಂದ್ರ ಅಧಿನಿಯಮದ ಅಧ್ಯಾಯ III ಮತ್ತು VIರ ಅನ್ವಯ.–** ಕೇಂದ್ರ ಅಧಿನಿಯಮದ ಅಧ್ಯಾಯ III ಮತ್ತು VIರ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿನ ದೃಢೀಕರಣಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**6. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಣಗೊಳಿಸುವಂತಿಲ್ಲ.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಣಗೊಳಿಸತಕ್ಕದ್ದಲ್ಲ.

**7. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯ ಅಥವಾ ರಾಜ್ಯ ಸರ್ಕಾರದ ಇತರ ನೌಕರರ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ ಅನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**8. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದಾದರ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಆಧಾರ್ ಸಂಖ್ಯೆಯನ್ನು ಬಳಸಬಹುದಾದ ವಿವಿಧ ರೀತಿಯ ಸಬ್ಸಿಡಿಗಳು, ಪ್ರಯೋಜನಗಳು, ಸೇವೆಗಳು ಮತ್ತು ಇತರ ಉದ್ದೇಶಗಳನ್ನು ಒದಗಿಸುವ ಅಥವಾ ಪಡೆಯುವ ಉದ್ದೇಶಗಳಿಗಾಗಿ ಆಧಾರ್ ಸಂಖ್ಯೆಯನ್ನು ಬಳಸುವ ವಿಧಾನವನ್ನು ನಿರ್ದಿಷ್ಟಪಡಿಸುವುದು;

(ಬಿ) ಅಗತ್ಯಗೊಳಿಸಬೇಕಾದ, ಅಥವಾ ನಿರ್ದಿಷ್ಟಪಡಿಸಬಹುದಾದ, ಅಥವಾ ನಿಯಮಗಳ ಮೂಲಕ ರಚಿಸಬೇಕಾದ ಉಪಬಂಧಗಳಿಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿದ್ದರೆ ಅದರ ಪ್ರತಿಯೊಂದು ಸದನದ ಮುಂದೆ, ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ನಿಕಟ ತರುವಾಯದ ಒಟ್ಟು ಮೂವತ್ತು ದಿನಗಳ ಅವಧಿಯ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ನಿಯಮವನ್ನು ರದ್ದುಗೊಳಿಸಬೇಕೆಂದು ಒಪ್ಪಿದರೆ, ಆ ನಿಯಮವು, ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದಂಥ ದಿನಾಂಕದಿಂದ ಸಂದರ್ಭಾನುಸಾರವಾಗಿ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಜಾರಿಗೊಳ್ಳತಕ್ಕದ್ದು ಅಥವಾ ರದ್ದಾಗತಕ್ಕದ್ದು; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಅಥವಾ ಬಿಟ್ಟುಬಿಡಲು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**9. ತೊಂದರೆಗಳ ನಿವಾರಣೆಗೆ ಅಧಿಕಾರ.– (1)** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಮತ್ತು ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ ಅಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಈ ಪ್ರಕರಣದ ಅಡಿಯಲ್ಲಿ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ